**Further chief examination by MM advocate for claimant.**

**Witness is duly sworn on 02-02-2024.**

I have submitted my affidavit evidence. I know contents of affidavit. Contents of the affidavit are true.

**I have produced the following records:-**

**1. Copy of registered sale deed dated: 21-12-2009 of Land Sy.No.154 extent 13 guntas of Ramadurga village of Devadurga Taluk:- Ex.P1.**

**2. Copy of registered sale deed dated: 18-02-2013 of Land Sy.No.106/1-7 extent 1 acre of Shivangi village of Devadurga Taluk:- Ex.P2.**

**3. Copy of registered sale deed dated: 18-02-2013 of Land Sy.No.106/1-5 extent 1 acre of Shivangi village of Devadurga Taluk:- Ex.P3.**

**4. Copy of registered sale deed dated: 18-02-2013 of Land Sy.No.106/1-4 extent 1 acre of Shivangi village of Devadurga Taluk:- Ex.P4.**

**5. Copy of agreement of sale dated: 04-12-2013 of Land Sy.No.104 extent 1 acre of Jagatgal village of Devadurga Taluk:- Ex.P5.**

6. Copy of registered agreement of sale dated: 24-01-2014 of Land Sy.No.178/1-4/C extent 11 guntas of Nagoli village of Devadurga Taluk:- Ex.P6.

7. Copy of registered agreement of sale dated: 24-01-2014 of Land Sy.No.13/1/2/B extent 11 guntas of Nagoli village of Devadurga Taluk:- Ex.P7.

8. Copy of price list of agricultural produces issued by the APMC for the year 2014-15:- Ex.P8.

9. Copy of Judgment dated: 18-11-2017 passed in LAC Nos.386/2016 (Old LAC No.142/2013) on the file of Senior Civil Judge at Devadurga:- Ex.P9.

10. Copy of Judgment dated: 06-12-2013 of Hon'ble High Court of Karnatak Kalaburagi Bench in MSA Nos.1131 to 1133/2013:- Ex.P10.

11. Copy of Judgment dated: 17-12-2014 of Hon'ble High Court of Karnatak Kalaburagi Bench in MFA Nos.201472/2014:- Ex.P11.

12. Copy of compromise petitoon and award in LAC No.786/2014 dated: 31-07-2015 passed by Sr.

**Civil Judge at Raichur (Sitting at Devadurga) Ex.P-12.**

**13. Water right certificates in all three number pertaining to LAC Nos.86/2019, 87/2019, 90/2019 Ex.P.13.**

**14. Certified copy of google map Ex.P14.**

**<u>Cross examination by Sri.MSN advocate for respondent:-</u>**

ಉಳಿದ ಎಲ್.ಎ.ಸಿ ಪ್ರಕರಣಗಳ ಅರ್ಜಿದಾರರು ಅವರ ಪರವಾಗಿ ನಾನು ಸಾಕ್ಷ್ಯ ನುಡಿಯಲು ನನಗೇ ಅಧಿಕಾರ ಪತ್ರ ನೀಡಿರುವುದಿಲ್ಲ.

2. ಭೂ ಸ್ವಾದೀನ ಆಗಿರುವ ಜಮೀನುಗಳು ದೇವದುರ್ಗ ತಾಲ್ಲೂಕಿನ ನಾಗೊಲಿ ಗ್ರಾಮದ ಜಮೀನುಗಳು ಆಗಿವೆ. ಸದರಿ ಜಮೀನುಗಳು ಮಳೆಯ ಆಧಾರಿತ ಒಣ ಬೇಸಾಯದ ಜಮೀನುಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಬಾವಿ ಮತ್ತು ಬೋರವೆಲ್ ಮುಖಾಂತರ ನೀರಾವರಿ ಮಾಡಿತಿಕೊಂಡಿರುತ್ತೇವೆ. ಕಾಲುವೆ ನಿರ್ಮಾಣಕ್ಕಾಗಿ ಜಮೀನುಗಳ ಭೂ ಸ್ವಾಧೀನ ಆಗಿರುತ್ತದೆ ಎಂದರೆ ಸರಿ. ಕಾಲುವೆ ನಿರ್ಮಾಣ ಮಾಡಿದ್ದರಿಂದ ಜಮೀನುಗಳಿಗೆ ನಿರಾವರಿ ಸೌಲಭ್ಯ ಒದಗಿ ಅನುಕೂಲವಾಗಿದೆ ಎಂದರೆ ಸರಿ. ಸದರಿ ನೀರಾವರಿ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನಿಪಿ-1 ರ ಕ್ರಯ ಪತ್ರವು ರಾಮದುರ್ಗ ಗ್ರಾಮದ ಕ್ರಯ ಪತ್ರ ಆಗಿರುತ್ತವೆ ಎಂದರೆ ಸರಿ.

4. ನಿಪಿ-2 ರಿಂದ 4 ರ ಕ್ರಯ ಪತ್ರಗಳು ಶಿವಂಗಿ ಗ್ರಾಮಕ್ಕೆ ಸಂಬಂದಿಸಿವೆ ಎಂದರೆ ಸರಿ. ಸದರಿ ದಾಖಲೆಗಳು ಮಹರ್ಷಿ ವಾಲ್ಮೀಕಿ ಅಬಿವೃದ್ದಿ ನಿಗಮದವರು ಜಮೀನುಗಳನ್ನು ಖರೀದಿಸಿ ಭೂ ರಹಿತರಿಗೆ ಜಮೀನು ಹಂಚಿಕೆ ಮಾಡುವ ಸಲುವಾಗಿ ಜಮೀನುಗಳನ್ನು ಕ್ರಯಕ್ಕೆ ಪಡೆದ ಕ್ರಯಪತ್ರಗಳು ಆಗಿವೆ ಎಂದರೆ ಸರಿ. 2013 ನೇ ಇಸವಿಯಲ್ಲಿ ಜಮೀನಿನ ವಾಸ್ತವಿಕ ಮಾರುಕಟ್ಟೆ ಬೆಲೆಗಿಂತ 3 ಪಟ್ಟು ಹೆಚ್ಚಿನ ಬೆಲೆ ನೀಡಿ ಮಹರ್ಷ ವಾಲ್ಮೀಕಿ ಅಭಿವೃದ್ದಿ ನಿಗಮದವರು ಜಮೀನುಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ.

5. ನಿಪಿ-5 ರಿಂದ 8 ರ ಖರೀದಿ ಕರಾರು ಪತ್ರಗಳು ನೈಜ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಕರಾರುಗಳ ಪಕ್ಷಕಾರರು ಯಾರು ಇರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸಾಲ ಪಡೆದುಕೊಳ್ಳುವ ಸಲುವಾಗಿ ನಿಪಿ-5 ರಿಂದ 8 ರ ಕ್ರಯ ಕರಾರುಗಳನ್ನು ಪಕ್ಷಕಾರರು ಮಾಡಿಕೊಂಡಿದ್ದರು ಮತ್ತು ಅವುಗಳಲ್ಲಿ ಜಮೀನಿನ ವಾಸ್ತವಿಕ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆ ತೋರಿಸಲಾಗಿದೆ ಎಂದರೆ ಸರಿಯಲ್ಲ.

6. ನಿಪಿ-9 ರಿಂದ 12 ರ ತೀರ್ಪಗಳು ಹಳೇಯ ಭೂ ಸ್ವಾದೀನ ಕಾಯ್ದೆಯ ಅಡಿ ಆಗಿರುತ್ತವೆ ಎಂದರೆ ಸರಿ. ನಿಪಿ-9 ರಿಂದ 12 ರ ತಿರ್ಪುಗಳ ಜಮೀನುಗಳು ನಮ್ಮ ಗ್ರಾಮಕ್ಕೆ ಸಂಬಂದಿಸಿದಲ್ಲ ಎಂದರೆ ಸರಿ.

7. 2011 ರಿಂದ ಇಸವಿಯಿಂದ 2014 ನೇ ಇಸವಿ ತನಕ ನಾಗೋಲಿ ಗ್ರಾಮದ ಜಮೀನುಗಳ ಮಾರಾಟ ವ್ಯವಹಾರಗಳು ನಡೆದಿವೆ ಎಂದರೆ ಸರಿ. ಸದರಿ ಮಾರಾಟ ಪತ್ರಗಳನ್ನು ಪ್ರತಿಗಳನ್ನು ಮತ್ತು ಕರಾರು ಪತ್ರಗಳ ಪ್ರತಿಗಳನ್ನು ಭೂ ಸ್ವಾದೀನ ಅಧಿಕಾರಿಗೆ ನಾವು ಕೊಟ್ಟಿರಲಿಲ್ಲ.

8. ಭೂ ಸ್ವಾಧೀನ ಮಾಡಿಕೊಳ್ಳುವ ಮೊದಲು ಭೂ ಮಾಲೀಕರಿಗೆ ನೋಟಿಸ್ಸು ನೀಡಲಾಗಿದೆ ಎಂದರೇ ಸರಿ. ಭೂ ಸ್ವಾಧೀನ ಅಧಿಕಾರಿಗೆ ನಾವು ದಾಖಲೆ ಕೊಟ್ಟಿರಲಿಲ್ಲ.

9. ನಾನು ಮತ್ತು ಉಳಿದ ಅರ್ಜಿದಾರರು ಹೆಚ್ಚಿನ ಪರಿಹಾರ ಪಡೆದುಕೊಳ್ಳುವ ದುರುದ್ದೇಶದಿಂದ ಸಂಬಂಧಪಡದೇ ಇರುವ ಕ್ರಯ ಪತ್ರಗಳು,ಕ್ರಯ ಕರಾರು ಮತ್ತು ಇತರೇ ದಾಖಲೆಗಳನ್ನು

ಹಾಜರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪತ್ರದಲ್ಲಿ ಸುಳ್ಳಿನ ವಿಷಯ ತಿಳಿಸಿದ್ದೇನೆ ಎಂದರೆ ಸರಿಯಲ್ಲ.

10. ಭೂ ಸ್ವಾಧೀನ ಪ್ರಕ್ರಿಯೆಯು 2014 ನೇ ಇಸವಿಯಲ್ಲಿ ಪ್ರಾರಂಭವಾಗಿತ್ತು ಎಂದರೆ ಸರಿ. ಭೂ ಸ್ವಾದೀನದ ಬಗ್ಗೆ ನಮಗೆ ನೋಟಿಸ್ಸು ನೀಡಿದ್ದರು ಎಂದರೇ ಸರಿ . ಭೂ ಸ್ವಾಧೀನ ಪ್ರಕ್ರಿಯೆಯ ಪ್ರಾಥಮಿದ ಅಧಿಸೂಚನೆಯ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿತ್ತು. ಜಮೀನಿನ ಜಂಟಿ ಮೊಜಿಣಿ ನಡೆಸಲಾಗಿತ್ತು ಎಂದರೆ ಸರಿ. ನಂತರ ಭೂ ಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆ ಪ್ರಕಟಿಸಲಾಗಿತ್ತು ಎಂದರೆ ಸರಿ. ಭೂ ಸ್ವಾಧೀನ ಅಧಿಕಾರಿಯು ಸ್ಥಳ ಪರಿಶೀಲಿಸಿ ಪ್ರತಿಯೊಂದು ಜಮೀನಿನಲ್ಲಿರುವ ಮರ ಗಿಡಗಳು, ಕಟ್ಟಡ ಇತ್ಯಾದಿಗಳನ್ನು ಪರಿಶೀಲಿಸಿ ಪ್ರತಿ ಜಮೀನಿಗೆ ಸರಿಯಾದ ಮಾರುಕಟ್ಟೆ ದರ ನಿರ್ದರಣೆ ಮಾಡಿ ಪರಿಹಾರ ಘೋಷಣೆ ಮಾಡಲಾಗಿದೆ ಎಂದರೆ ಸರಿಯಲ್ಲ.

11. ಪ್ರಾಥಮಿಕ ಅಧಿಸೂಚನೆ ದಿನಾಂಕಕ್ಕಿಂತ ಮೂರು ವರ್ಷಗಳ ತನಕದ ಹಿಂದಿನ ಅವಧಿಯ ನಮ್ಮ ಗ್ರಾಮದ ಜಮೀನುಗಳ ನೊಂದಣಿ ಕ್ರಯ ಪತ್ರಗಳನ್ನು ನಾವು ಭೂ ಸ್ವಾಧೀನ ಅಧಿಕಾರಿಗೆ ಕೊಟ್ಟಿರಲಿಲ್ಲ ಎಂದರೆ ಸರಿ.

12. ಭೂ ಸ್ವಾಧೀನ ಅಧಿಕಾರಿಗಳು 2011 ನೇ ಇಸವಿಯಿಂದ 2014 ನೇ ಇಸವಿಯ ತನಕ ನಮ್ಮ ಗ್ರಾಮದ ಜಮೀನುಗಳ ನೊಂದಣಿ ಕ್ರಯ ಪತ್ರಗಳ ಅಂಕಿ ಸಂಖ್ಯೆಗಳನ್ನು ಪಡೆದುಕೊಂಡು ಅವುಗಳ ಆದಾರದ ಮೇಲೆ ಭೂ ಸ್ವಾಧೀನ ಕಾಯ್ದೆ 2013 ಕಲಂಃ 26 ರ ಪ್ರಕಾರ ಸರಿಯಾಗಿ ಭೂ ಸ್ವಾಧೀನ ಆಗಿರುವ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ನಿರ್ದರಣೆ ಮಾಡಿ ಸೂಕ್ತ ಪರಿಹಾರದ ಬಗ್ಗೆ ಐ ತೀರ್ಪು ರಚಿಸಿರುತ್ತಾರೆ ಎಂದರೆ ಅವರು ಅಕ್ಕ ಪಕ್ಕದ ಗ್ರಾಮದ ಜಮೀನುಗಳ ಕ್ರಯ ಪತ್ರಗಳನ್ನು ಪಡೆದು ಪರಿಗಣಿಸಿರುವುದಿಲ್ಲ.

13. ಭೂ ಸ್ವಾಧೀನ ಕಾಯ್ದೆ 2013 ರ ಕಲಂಃ 26 ರಿಂದ 30 ರ ಪ್ರಕಾರ ಭೂ ಸ್ವಾಧೀನ ಅಧಿಕಾರಿಯು ಎಲ್ಲಾ ಅಂಶಗಳನ್ನು ಮತ್ತು ಕ್ರಯ ಪತ್ರಗಳ ಅಂಕಿ ಸಂಖ್ಯೆಗಳನ್ನು ಆದಾರಿಸಿ ಸರಿಯಾದ ಮಾರುಕಟ್ಟೆ ದರ ನಿರ್ದರಿಸಿ ಭೂ ಸ್ವಾಧೀನ ಮಾಡಿಕೊಂಡಿರುವ ಜಮೀನುಗಳಿಗೆ ಸರಿಯಾದ ಪರಿಹಾರ ಘೋಷಿಸಿರುವುದರಿಂದ ನಾನು ಮತ್ತು ಉಳಿದ ಕೇಸುಗಳ ಅರ್ಜಿದಾರರು ಹೆಚ್ಚಿನ ಪರಿಹಾರ ಕೇಳಲು

ಅರ್ಹರಲ್ಲ ಎಂದರೆ ಸರಿಯಲ್ಲ. ಭೂ ಸ್ವಾಧೀನ ಅಧಿಕಾರಿಯು ಸ್ಥಳಕ್ಕೆ ಬೇಟಿ ನೀಡದೇ ಮತ್ತು ಭೂಮಿಯ ಫಲವತ್ತತೆ, ಸೌಲಭ್ಯಗಳು ಮತ್ತ ಗುಣಗಳು ಹಾಗೂ ಬೆಳೆಗಳು ಇತ್ಯಾದಿಗಳನ್ನು ಪರಿಶೀಲಿಸದೇ ಕಡಿಮೆ ಪರಿಹಾರ ಘೋಷಣೆ ಮಾಡಲಾಗಿದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳಿನ ವಿಷಯ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ 8 ಮತ್ತು 9 ರಿಂದ 12 ರ ದಾಖಲೆಗಳ ಜಮೀನುಗಳಿಗೂ ಮತ್ತು ಭೂ ಸ್ವಾದೀನ ಆಗಿರುವ ಜಮೀನುಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

14. ಭೂ ಸ್ವಾಧೀನ ಅಧಿಕಾರಿಯು ಸ್ಥಳಕ್ಕೆ ಬೇಟಿ ನೀಡಿ ಸ್ಥಳವನ್ನು ಪರಿಶೀಲಿಸಿ ಜಮೀನುಗಳ ಮಾರಾಟ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಗಣಿಸಿ ಅವುಗಳ ಆಧಾರದ ಮೇಲೆ ಭೂ ಸ್ವಾಧೀನ ಮಾಡಿಕೊಳ್ಳಲಾದ ಜಮೀನುಗಳಿಗೆ ಸರಿಯಾದ ಮಾರುಕಟ್ಟೆ ಬೆಲೆ ನಿರ್ದರಿಸಿ ಸರಿಯಾದ ಪರಿಹಾರ ಘೋಷಣೆ ಮಾಡಲಾಗಿದೆ ಎಂದರೆ ಸರಿಯಲ್ಲ.

15. ನಿಪಿ-8 ರಲ್ಲಿ ಕೃಷಿ ಉತ್ಪನ್ನಗಳ ಅಂದಾಜು ಬೆಲೆ ತೋರಿಸಲಾಗಿದೆ ಎಂದರೆ ಸರಿಯಲ್ಲ. ಭೂ ಸ್ವಾದೀನ ಆಗಿರುವ ಜಮೀನುಗಳಲ್ಲಿ ನಾವು ಮಳೆಯ ಆದಾರದಿಂದ ವರ್ಷಕ್ಕೆ ಒಂದು ಬೆಳೆ ಬೆಳೆಯುತ್ತಿದ್ದೆವು. ನಿಪಿ-8 ರ ದಾಖಲೆಯನ್ನು ನಾವು ಸೃಷ್ಟಿಸಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ.

16. ನಿಪಿ-13 ರ ನೀರಿನ ಹಕ್ಕಿನ ಪ್ರಮಾಣ ಪತ್ರಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-

ಇಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಣ ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ.**

ಸಹಿ

**1ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,**
**ರಾಯಚೂರು.**

(Computerized in the open court on my dictation)

R.O.A.C

1st A.D.J.Raichur